ಶ್ರೀ ಜೆ. ಹೆಚ್. ಪಟೇಲ್,—ಸ್ವಾಮಿ, ವಿದ್ಯುದ್ದೀಕರಣದ ಲೆಕ್ಕವನ್ನು ಕೇವಲ ಕಂಬಗಳನ್ನು ಹಾಕಿದ ಆಧಾರದಮೇಲೆಯೇ ನಾವು ಮಾಡುವುದಿಲ್ಲ. ಎಲ್ಲಿ ಕಂಟ್ಯಾಕ್ಟರ್‌ಗಳು ಕೆಲಸವನ್ನೇ ಮಾಡದೆ, ವಿದ್ಯುದ್ದೀಕರಣ ಮಾಡಿದ್ದೇವೆಂದು ಯಾರಾದರೂ ಕಂಟ್ಯಾಕ್ಟರ್‌ಗಳು ಹಣವನ್ನು ತೆಗೆದುಕೊಂಡಿದ್ದರೆ ಆ ಮಾಹಿತಿಯನ್ನು ನಮಗೆ ಮಾನ್ಯ ಸದಸ್ಯರು ಕೊಟ್ಟರೆ ಅದರ ಬಗ್ಗೆ ಎನ್‌ಕ್ವೈರಿ ಮಾಡಿಸಿ ಸಂಬಂಧ ಪಟ್ಟ ಕಂಟ್ರಾಕ್ಟರ್ ಅಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಆ ಕೆಲಸ ಆಗಿಲ್ಲದಿದ್ದರೆ ಅದನ್ನು ವಿದ್ಯುಚ್ಛಕ್ತಿ ಇಲಾಖೆಯಿಂದ ಮಾಡಿಸಿಕೊಡುತ್ತೇವೆ. ಇನ್ನು ಅವರು ತಮ್ಮ ತಾಲ್ಲೂಕಿನಲ್ಲಿ ಕೆಲವು ಹಳ್ಳಿಗಳು ಹೊಸಗಿದೆಯೆಂದು ಹೇಳುತ್ತಿದ್ದಾರೆ. ಬಹುಶಃ ಹ್ಯಾಮೆಟ್ಸ್‌ನ್ನು ಏನಾದರೂ ಹೇಳುತ್ತಿದ್ದಾರೇನೋ ಗೊತ್ತಿಲ್ಲ. ನಮ್ಮ ಅಭಿಪ್ರಾಯದಲ್ಲಿ ಆ ಹಳ್ಳಿಗಳಲ್ಲದಿರಬಹುದು. ಮುಖ್ಯ ಹಳ್ಳಿಗ ಳಾಗಿದ್ದರೆ ಅವುಗಳ ಹೆಸರುಗಳನ್ನು ಮಾನ್ಯ ಸದಸ್ಯರು ತಿಳಿಸಲಿ.

ಇನ್ನು ಸಿರಸಿ ತಾಲ್ಲೂಕಿನ ೧೯೨ ಗಾಮಗಳ ಪೈಕಿ ೧೧೧ ಗ್ರಾಮಗಳಿಗೆ ವಿದ್ಯುದ್ದೀಕರಣ ಆಗಿದೆ. ಸಿದ್ದಾಪುರ ತಾಲ್ಲೂಕಿನಲ್ಲಿ ೧೫೭ ಗ್ರಾಮಗಳಿಗೆ ವಿದ್ಯುದ್ದೀಕರಣ ಮಾಡಲಾಗಿದೆ. ಉಳಿದಿರತಕ್ಕ ಗ್ರಾಮಗಳಿಗೆ ೮೮-೮೯ನೇ ಸಾಲಿನೊಳಗೆ ವಿದ್ಯುದ್ದೀಕರಣ ಮಾಡಿಸಿಕೊಡುತ್ತೇವೆ. ಕೆಲವರ ಎನ್ನತಕ್ಕ ಹಳ್ಳಿಗೆ ಸಂಬಂಧಿಸಿದಂತೆ ಕಂಬವನ್ನೇ ಹಾಕಿಲ್ಲ, ಕರೆಂಟನ್ನು ಕೊಟ್ಟಿದ್ದೇವೆಂದು ಹೇಳ. ತ್ತಿದ್ದಾರೆಂದು ಹೇಳಿದರು, ಮಾನ್ಯ ಸದಸ್ಯರು ಅದರ ವಿವರವನ್ನು ಕಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ, ಇದೇರೀತಿ ದೊಡ್ಡಮನೆಯು ಹೊನ್ನೇ ಬಿಡಾರಕ್ಕೆ ಸಂಬಂಧಪಟ್ಟಂಥ ವಿಚಾರವನ್ನೂ ಕೂಡ ಮಾನ್ಯ ಸದಸ್ಯರು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

೩೩ ಕೆ. ವಿ. ವಿದ್ಯುತ್ ಕೇಂದ್ರದ ಸ್ಥಾಪನೆ

೮೧ (೬೧)ಬಿ ಶ್ರೀ ಬಾಬುರೆಡ್ಡಿ ತುಂಗಳ (ಬೀಳಗಿ).—ಮಾನ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಬೀಳಗಿ ತಾಲ್ಲೂಕಿನ ಗಲಗಲಿ ಗ್ರಾಮದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ೩೩ ಕೆ. ವಿ. ಸ್ಟೇಷನ್ ಸ್ಥಾಪಿಸುವ ನಿರ್ಣಯಕ್ಕೆ ಬಂದಿದ್ದಾರೆಯೆ?

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು ಹಾಗೂ ಕೆಲಸ ಪ್ರಾರಂಭವಾಗಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಸಚಿವರು).—

ಅ) ಈ ವಿಷಯ ಪರಿಶೀಲನೆಯಲ್ಲಿದೆ.

ಆ) ಪೋಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸ್ವಾಮಿ, ಬೀಳಗಿ ತಾಲ್ಲೂಕಿನಲ್ಲಿರುವ ಗಲಗಲಿಯು ಕೃಷ್ಣಾ ನದಿ ದಂಡೆಯಲ್ಲಿದೆ. ಇಲ್ಲಿ ೩೩ ಕೆ. ವಿ. ಸ್ಟೇಷನ್‌ನ್ನು ಪ್ರಾರಂಭ ಮಾಡಬೇಕಾಗಿದೆ. ೧೫ ಕಿಲೋಮೀಟರ್ ಪ್ರದೇಶದಲ್ಲಿ ಎಲ್ಲಿಯೂ ಅಲ್ಲಿ ಸ್ಥಳಾವಕಾಶ ಇಲ್ಲದಿರುವುದರಿಂದ ಕೆ.ಇ.ಬಿ. ನವರು ಒಂದು ಕಡೆ ೨ ಎಕರೆ ಜಾಗವನ್ನು ಈ ಉದ್ದೇಶಕ್ಕಾಗಿ ತಮ್ಮ ಸ್ವಾಧೀನಕ್ಕೆ ಪಡೆದುಕೊಂಡಿ ದ್ದಾರೆ. ಈಗ ಅಲ್ಲಿ ೩೩ ಕೆ. ವಿ. ಸ್ಟೇಷನ್‌ನ್ನು ಸ್ಥಾಪಿಸಲು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಗಲಗಲಿ ಗ್ರಾಮವು ನಾನು ಭೂಪಟದಲ್ಲಿ ನೋಡಿರುವಂತೆ ಜಮಖಂಡಿ ಮತ್ತು ಬೀಳಗಿ ಇವುಗಳ ಮಧ್ಯೆ ಬರುತ್ತದೆ. ಈಗಾಗಲೇ ಜಮಖಂಡಿಯಲ್ಲಿ ೩೩ ಕೆ. ವಿ. ಸ್ಟೇಷನ್‌ನ್ನು ೧೧೦ ಕೆ. ವಿ. ಸ್ಟೇಷನ್ ಆಗಿ ಪರಿವರ್ತನೆ ಮಾಡಲು ಅನುಮತಿ ನೀಡಿದೆ. ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಇನ್ನು ಗಲಗಲಿ ಯಲ್ಲಿ ಸ್ಟೇಷನ್ ಸ್ಥಾಪಿಸಬೇಕಾದರೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಅಲ್ಲಿ ಇದರ ಅವಶ್ಯಕತೆ ಇದ್ದೇ ಇದೆ ಎಂದು ಕಂಡುಬಂದರೆ ೩೩ ಕೆ. ವಿ. ಸ್ಟೇಷನ್‌ನ್ನು ಸ್ಥಾಪಿಸಲು ಪ್ರಯತ್ನ ಮಾಡುತ್ತೇವೆ.

ನಿರ್ಬಂಧ ವಿದ್ಯುತ್ ಕೇಂದ್ರಗಳ ಮೂಲಕ ವಿದ್ಯುತ್ ಉತ್ಪಾದನೆ

೮೨ (೮೮) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—